


ಖರಬಂದಾ, ಅಲ್ಕಾಝೀ... ಇಂಥ ಅಸಂಖ್ಯ ಪ್ರತಿಭಾ ಪಡೆಯ, ಕಳೆದ ನಾಲ್ಕು ದಶಕಗಳ ಕಲಾಕೃತಿಗಳ ಋಣದಲ್ಲಿ ನನ್ನ ಪೀಳಿಗೆಯ ಸಂವೇದನೆ ಇದೆ. ಮನೋಹರ ಗ್ರಂಥಮಾಲೆಯಲ್ಲಿ ಅವರ ನಾಟಕಗಳ ಹೊದಿಕೆಗೆ ಅವರೇ ಬಿಡಿಸಿದ ಚಿತ್ರಕಲೆಯಿಂದ ಹಿಡಿದು 'ಮೃಚ್ಛಕಟಿಕ'ದ (ಉತ್ಸವ್) ವಸಂತಸೇನೆಯ ಆಭರಣದ ಸಂದೂಕದ ತನಕ, ಮುಂಬಯಿಯ ರವೀಂದ್ರ ನಾಟ್ಯಮಂದಿರದಲ್ಲಿ ಜೋಕುಮಾರ ಸ್ವಾಮಿಯ ಕೋವಿ ಹಿಡಿದ ಗೌಡನ ಗತ್ತಿನ ಲಾಸ್ಯದಿಂದ ಹಿಡಿದು, ದೆಹಲಿಯ ಪುರಾನಾ ಕಿಲಾವನ್ನೇ ರಂಗಭೂಮಿಯಾಗಿಸಿಕೊಂಡು ಗಗನಕ್ಕೆ ಭಗ್ನ ಮರದಂತೆ ಕೈಯೆತ್ತಿ ನಿಂತ ಅಲ್ಕಾಝೀ ಅವರ 'ತುಘಲಕ್' ತನಕ,1997ರ ಅಹಮದ್‌ನಗರದ ಅಖಿಲಭಾರತ ಮರಾಠಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ಮರಾಠಿಗರನ್ನು ರೋಮಾಂಚನಗೊಳಿಸುವಂತೆ ಅವರು ಮಾಡಿದ ಉಸ್ಫೂರ್ತ, ವಿದ್ವತ್‌ಪೂರ್ಣ ಮರಾಠಿ ಭಾಷಣದಿಂದ ಹಿಡಿದು (ಅವರಿಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ ಸಿಗಲಿಲ್ಲ!), ಗೋವಾದಲ್ಲಿ ಕೊಂಕಣಿ ಸಾಹಿತ್ಯ ಸಮ್ಮೇಲನದ ಅತಿಥಿಯಾಗಿ ಅವರು ಆಡಿದ ಕೌಟುಂಬಿಕ ಕೊಂಕಣಿ ಮಾತುಗಳ ತನಕ, ಕುಮಾರ ಗಂಧರ್ವರು ಸ್ತ್ರೀ ಪಾತ್ರದಲ್ಲಿ ಹೇಗೆ ಸೀರೆ ಸೆರಗನ್ನು ಬೆರಳಿಗೆ ಸುತ್ತಿ ಹಾಡುತ್ತಿದ್ದರು ಎಂಬುದನ್ನು ತಾಯಿಯಿಂದ ಗುಟ್ಟಾಗಿ ಪಡೆದ ಪ್ರಾತ್ಯಕ್ಷಿಕೆಯಿಂದ ಹಿಡಿದು, 'ಒಂದಾನೊಂದು ಕಾಲದಲ್ಲಿ' ಚಿತ್ರಕ್ಕಾಗಿ ಕೇರಳದ ಕಲರಿಪಟ್ಟು ಪ್ರವೀಣರಿಂದ ಝಳಪಿಸುವ ಖಡ್ಗ ಕಾಳಗದ ತಾಲೀಮಿನ ತನಕ, ಪುರಾಣ ಶ್ರವಣ, ಜಾನಪದ, ಶಿಲಾಶಾಸನ, ನಾಟ್ಯಸಂಗೀತ, ಮಾನವಿಕಗಳಿಂದ ಹಿಡಿದು ಅತ್ಯಾಧುನಿಕ ಕಾವ್ಯದ ತನಕ, ನಿಗೂಢ ಕೊಳಗಳ ಮಾಯಾ ಕಾಡಿನಿಂದ ಹಿಡಿದು ಉಧ್ವಸ್ಥ ಮನುಷ್ಯನ ಇಂದಿನ ಪಾಡಿನ ತನಕ... ಅಲೆ ಅಲೆಯಾಗಿ ತುಯ್ಯುತ್ತಲೇ ಬಂದ ಧೀರೋದಾತ್ತ ಮನಸ್ಸು ಅದು. ಸಾಮಾಜಿಕ ಮನುಷ್ಯನ ಘನತೆಯೇ ಪರಮೋಚ್ಚ ಧರ್ಮ ಎಂದು ನಂಬಿದ ಅಗ್ನಿಹೋತ್ರ ಅದು. ಆ ಕುರಿತ ಕೃತಜ್ಞತಾಪೂರ್ವಕ ಬೆರಗಷ್ಟೆ ನನ್ನದು. ಕೃತಿಗಳ ಮೂಲಕ ದತ್ತವಾಗಿರುವ ಅವರ ಮನಸ್ಸಿನೊಂದಿಗಿನ ಒಡನಾಟವೇ ಇಷ್ಟು ವ್ಯಾಪಕವಾಗಿ, ಆಳವಾಗಿ ಇದ್ದಾಗ, ವೈಯಕ್ತಿಕ ಒಡನಾಟದ ಹಂಗೇ ಇರುವುದಿಲ್ಲ.

ನಾನು ಮೊದಲ ಬಾರಿಗೆ ಅವರನ್ನು ನೋಡಿದ್ದು ಶಿರಾಲಿಯ ಚಿತ್ರಾಪುರ ಮಠದ ಅಭಿನವ ಸಾಹಿತ್ಯ ಸಮ್ಮೇಲನದಲ್ಲಿ. 1972 ಇರಬಹುದು. ಶಿವರಾಮ ಕಾರಂತ, ನನ್ನ ತಂದೆ ಗೌರೀಶ ಕಾಯ್ಕಿಣಿ ಇದ್ದರು. ಅವರು ಯಾವತ್ತೂ ನನಗೆ, ವಯಸ್ಸಿಗೆ ಮೀರಿದ ಪ್ರೌಢಿಮೆಯ ಕಳೆ ಹೊತ್ತವರಂತೆಯೇ